## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1480
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 20.03.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ವಾರಾಹಿ ಯೋಜನೆ ಎಷ್ಟು ತಾಲ್ಲೂಕುಗಳಿಗೆ ಯಾವ ಪ್ರಮಾಣದ ಕುಡಿಯುವ ನೀರನ್ನು ಪೂರೈಕೆ ಮಾಡುತ್ತಿದೆ; (ಮಾಹಿತಿ ನೀಡುವುದು) | ವಾರಾಹಿ ಯೋಜನೆಯು ಉಡುಪಿ, ಕುಂದಾಪುರ ಮತ್ತು ಬೈಂದೂರು ತಾಲ್ಲೂಕುಗಳಲ್ಲಿ ನೀರಾವರಿಗೆ ನೀರೊದಗಿಸುವ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ಕುಡಿಯುವ ನೀರು ಪೂರೈಕೆ ಸೇರಿರುವುದಿಲ್ಲ.<br><br>ಆದರೆ, ವಾರಾಹಿ ನೀರಾವರಿ ಯೋಜನೆಯ ಎಡದಂಡೆ ಕಾಲುವೆಯಿಂದ 45 ಎಂಎಲ್‌ಡಿ ನೀರನ್ನು ಉಡುಪಿ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಸಂಬಂಧ ಅನುಮತಿ ನೀಡಲಾಗಿರುತ್ತದೆ. |
| ಆ | ಈ ಯೋಜನೆ ಕಾಮಗಾರಿ ಯಾವಾಗ ಪ್ರಾರಂಭಿಸಲಾಯಿತು; ಯಾವಾಗ ಪೂರ್ಣಗೊಳಿಸಲಾಗುವುದು; ಪೂರ್ಣಗೊಳಿಸಲು ಇರುವ ಸಮಸ್ಯೆಗಳೇನು; (ಮಾಹಿತಿ ನೀಡುವುದು) | ವಾರಾಹಿ ನೀರಾವರಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ 71 ಜಿಐಪಿ 76, ದಿನಾಂಕ:27.03.1979ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯ ತೀರುವಳಿ ಪಡೆಯಲು ವಿಳಂಬವಾಗಿದ್ದರಿಂದ ಸದರಿ ಯೋಜನೆಯನ್ನು 2003-04ನೇ ಸಾಲಿನಲ್ಲಿ ಕರ್ನಾಟಕ ನೀರಾವರಿ ನಿಗಮಕ್ಕೆ ವಹಿಸಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.<br><br>ಸದರಿ ಯೋಜನೆಯಡಿ ಡೈವರ್ಶನ್ ವಿಯರ್ ಕಾಮಗಾರಿ ಪೂರ್ಣಗೊಂಡಿದ್ದು, ಕಾಲುವೆಗಳ ವಿವರ ಈ ಕೆಳಕಂಡಂತಿವೆ:<br><br>1. ವಾರಾಹಿ ಬಲದಂಡೆ ಸಾಮಾನ್ಯ ನಾಲೆ (Common Canal) ಸರಪಳಿ: 0.00ಕಿ.ಮೀ ರಿಂದ 18.725 ಕಿ.ಮೀ ಕಾಮಗಾರಿಯು ಪೂರ್ಣಗೊಂಡಿದ್ದು, ನೇರ ತೂಬುಗಳ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲಾಗಿರುತ್ತದೆ.<br><br>2. ವಾರಾಹಿ ಎಡದಂಡೆ ನಾಲೆ ಸ: 0.00 ಕಿ.ಮೀ ರಿಂದ ಸ:43.694 ಕಿ.ಮೀ ರವರೆಗಿನ (ಒಟ್ಟು ಉದ್ದ 43.694 ಕಿ.ಮೀ) ಮುಖ್ಯ ನಾಲಾ ಕಾಮಗಾರಿಗಳು ಹಾಗೂ ಇದರಡಿ ಬರುವ ಒಟ್ಟು 26 ವಿತರಣಾ ನಾಲೆಗಳ ಪೈಕಿ 14 ಸಂಖ್ಯೆ ವಿತರಣಾ ನಾಲೆ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.<br><br>03 ಸಂಖ್ಯೆ ವಿತರಣಾ ನಾಲಾ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ, 02 ಸಂಖ್ಯೆ ವಿತರಣಾ ನಾಲಾ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಬಾಕಿ 07 ಸಂಖ್ಯೆ ವಿತರಣಾ ನಾಲಾ ಕಾಮಗಾರಿಗಳ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>3. ವಾರಾಹಿ ಏತ ನೀರಾವರಿ ಕಾಲುವೆ 0.00 ಕಿ.ಮೀ ರಿಂದ 26.77 ಕಿ.ಮೀ ಕಾಮಗಾರಿ ಪೈಕಿ 14.035 ಕಿ.ಮೀ. ಕಾಮಗಾರಿ ಪೂರ್ಣಗೊಂಡಿರುತ್ತದೆ.<br><br>4. ಮೂಲ ಯೋಜನೆಯಂತೆ ವಾರಾಹಿ ಬಲದಂಡೆ ನಾಲಾ ಕಾಮಗಾರಿಯ ಸ: 18.419 ಕಿ.ಮೀ ರಿಂದ 42.738 ಕಿ.ಮೀ ವರೆಗಿನ ನಾಲಾ ಪಂಕ್ತೀಕರಣದಲ್ಲಿ ಕಾಲುವೆಗೆ ಹೆಚ್ಚುವರಿ ಅಗೆತದ ಆಳ ಬರುತ್ತಿರುವುದರಿಂದ ಹಾಗೂ 60 ಎಕರೆ ರಕ್ಷಿತ ಅರಣ್ಯ ಪ್ರದೇಶ ಮತ್ತು ಡೀಮ್ಡ್ ಅರಣ್ಯ ಪ್ರದೇಶಗಳಲ್ಲಿ ಹಾದುಹೋಗುತ್ತಿರುವುದರಿಂದ ನಾಲಾ ಪಥವನ್ನು ಮೂಲ ಅಚ್ಚುಕಟ್ಟು ಪ್ರದೇಶದಲ್ಲಿ ಯಾವುದೇ ವ್ಯತ್ಯಾಸವಿಲ್ಲದೇ |
| ಇ | ವಾರಾಹಿ ಯೋಜನೆ ಎಷ್ಟು ಕಿಲೋಮೀಟರುಗಳ ಉದ್ದದ ನೀರಾವರಿ ಕಾಲುವೆ ಆಗಿರುತ್ತದೆ. ಸದರಿ ಕಾಮಗಾರಿ ಒಟ್ಟು ಎಷ್ಟು ಕಿ.ಮೀ ವರೆಗೆ ನೀರು ಹರಿಸಲಾಗಿದೆ ಹಾಗೂ ಕಾಲುವೆಗಳ ಕಾಮಗಾರಿ ಅರ್ಧದಲ್ಲಿ ಬಾಕಿ ಉಳಿಯಲು ಕಾರಣವೇನು; (ಈ ಬಗ್ಗೆ ಸಂಪೂರ್ಣ ವಿವರ ನೀಡುವುದು) | |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಬದಲಾಯಿಸಿ, ವಾರಾಹಿ ಬಲದಂಡೆ ನಾಲೆಯ ಪರಿಷ್ಕೃತ ನಾಲಾ ಪಥ ಸ: 18.419 ಕಿ.ಮೀ ರಿಂದ ಸ:27.23 ಕಿ.ಮೀ ವರೆಗೆ ಗುರುತಿಸಲಾಗಿದ್ದು, ಈ ನಾಲಾ ಕಾಮಗಾರಿಗಳ ಅಂದಾಜು ಪತ್ರಿಕೆಯು ಸಿದ್ಧಪಡಿಸಲಾಗಿದ್ದು, ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲನೆಯಲ್ಲಿದೆ.<br><br>ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬ, ಅರಣ್ಯ ಇಲಾಖೆಯಿಂದ ರಾಜ್ಯ ಅರಣ್ಯ ಹಾಗೂ ಕಾಯ್ದಿಟ್ಟ ಅರಣ್ಯದಲ್ಲಿನ ಮರಗಳನ್ನು ತೆರವುಗೊಳಿಸುವಲ್ಲಿನ ವಿಳಂಬ, ಸರ್ಕಾರಿ ಸಿ ಅಂಡ್ ಡಿ ಭೂಮಿಯನ್ನು 'ಡೀಮ್ಡ್ ಫಾರೆಸ್ಟ' ಅಡಿಯಲ್ಲಿ ಪರಿಗಣಿಸಿರುವ ಕಾರಣಗಳಿಂದಾಗಿ ಕಾಲುವೆ ಕಾಮಗಾರಿ ವಿಳಂಬವಾಗಿರುತ್ತದೆ.<br><br>ಪ್ರಸ್ತುತ, ಸದರಿ ಯೋಜನೆಯಡಿ ಸಾಮಾನ್ಯ ಕಾಲುವೆ 0.00ಕಿ.ಮೀ ರಿಂದ 18.725 ಕಿ.ಮೀ ಹಾಗೂ ಎಡದಂಡೆ ಮುಖ್ಯ ಕಾಲುವೆ ಸ: 0.00 ಕಿ.ಮೀ ರಿಂದ ಸ:43.694 ಕಿ.ಮೀವರೆಗೆ ನೀರನ್ನು ಹರಿಸಲಾಗಿದ್ದು, 6100 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಗೆ ನೀರೊದಗಿಸಲಾಗುತ್ತಿದೆ. |
| ಈ | 1999 ರಿಂದ 2024 ರವರೆಗೆ ವಾರಾಹಿ ಯೋಜನೆಗೆ ನೀರಾವರಿ ನಿಗಮದಿಂದ ಇಲ್ಲಿಯವರೆಗೆ ಖರ್ಚು ಮಾಡಲಾದ ಒಟ್ಟು ಮೊತ್ತ ಎಷ್ಟು; ಯಾವ ಯಾವ ಯೋಜನೆಗಳಿಗೆ ಎಷ್ಟು ಮೊತ್ತ ಖರ್ಚು ಮಾಡಲಾಗಿದೆ; (ಈ ಬಗ್ಗೆ ಸಂಪೂರ್ಣ ವಿವರ ನೀಡುವುದು) | ವಾರಾಹಿ ನೀರಾವರಿ ಯೋಜನೆಯಡಿ, 1999 ರಿಂದ 2024 ರವರೆಗೆ ಮಾಡಲಾಗಿರುವ ವೆಚ್ಚದ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| ಉ | ವಾರಾಹಿ ಯೋಜನೆ ಹೆಸರಿನಲ್ಲಿ ಕರ್ನಾಟಕ ನೀರಾವರಿ ನಿಗಮವು ದಕ್ಷಿಣ ಕನ್ನಡ ಜಿಲ್ಲೆಯ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಕಾಮಗಾರಿಗೆ ಹಣವನ್ನು ನೀಡಲಾಗಿದೆ; | ವಾರಾಹಿ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ, ಪುತ್ತೂರು ತಾಲ್ಲೂಕುಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |
| ಊ | ವಾರಾಹಿ ಯೋಜನೆಯ ಯಾವ ಕಾಲುವೆಗಳ ಕಾಮಗಾರಿಗೆ ಅರಣ್ಯ ಇಲಾಖೆಯ ಅನುಮತಿ ಅಗತ್ಯವಿರುತ್ತದೆ; ಅರ್ಧದಲ್ಲಿ ನಿಂತಿರುವ ಕಾಮಗಾರಿಗಳಾವುವು ಮತ್ತು ಸದರಿ ಯೋಜನೆಗೆ ಸಂಬಂಧಿಸಿದ ಲ್ಯಾಂಡ್ಸ್ ಸರ್ವೆ ಅಗತ್ಯವಿರುವ ವಿವರವನ್ನು ನೀಡುವುದು? | ವಾರಾಹಿ ನೀರಾವರಿ ಯೋಜನೆಯಡಿ ವಾರಾಹಿ ಏತ ನೀರಾವರಿ ಯೋಜನೆಗೆ 17.49 ಹೆಕ್ಟೇರ್ ಹಾಗೂ ವಾರಾಹಿ ಬಲದಂಡೆ ಕಾಲುವೆ ಸುಮಾರು 11.86 ಹೆಕ್ಟೇರ್ ಅರಣ್ಯ ಪ್ರದೇಶದ ಅಗತ್ಯವಿರುತ್ತದೆ.<br><br>ವಾರಾಹಿ ಏತ ನೀರಾವರಿ ಯೋಜನೆಯಡಿ 12.735 ಕಿ.ಮೀ. ಕಾಮಗಾರಿ ಬಾಕಿ ಇದ್ದು, ವಾರಾಹಿ ಬಲದಂಡೆ ನಾಲೆಯ ಪರಿಷ್ಕೃತ ನಾಲಾ ಪಥ ಪರಿಶೀಲನೆಯಲ್ಲಿದೆ.<br><br>ಅರಣ್ಯ ಇಲಾಖೆಯ ಅನುಮತಿ ಪಡೆದು ಯೋಜನೆಗೆ ಅಗತ್ಯವಿರುವ ಜಮೀನುಗಳ ಭೂಸ್ವಾಧೀನತೆಗೆ ಅಗತ್ಯ ಕ್ರಮ ವಹಿಸಲಾಗುವುದು.<br><br>ವಾರಾಹಿ ಯೋಜನೆಯಡಿ ಎಡದಂಡೆ ಕಾಲುವೆಯಡಿ ಬಾಕಿ ಇರುವ ವಿತರಣಾ ನಾಲೆಗಳ ಸರ್ವೆ ಕಾರ್ಯ ಕಾರ್ಯವು ಇಲಾಖಾ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಬಲದಂಡೆ ನಾಲೆಯ ನಾಲಾ ಪಥ ಬದಲಾವಣೆಗೆ ಈಗಾಗಲೇ ಸರ್ವೆ ಕಾರ್ಯ ಕೈಗೊಂಡು ಅಂದಾಜು ಪಟ್ಟಿ ಸಿದ್ಧಪಡಿಸಲಾಗಿದೆ. ಏತ ನೀರಾವರಿ ಯೋಜನೆಯನ್ನು ಟರ್ನ್ ಕೀ ಆಧಾರದ ಮೇಲೆ ವಹಿಸಲಾಗಿದ್ದು, ಈಗಾಗಲೇ ಸರ್ವೆ ಕಾರ್ಯ ಪೂರ್ಣಗೊಂಡಿರುತ್ತದೆ. |

**ಜಸಂಇ 65 ಎಂಎಲ್ಎ 2025**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

**ಅನುಬಂಧ-1**

## ವಾರಾಹಿ ನೀರಾವರಿ ಯೋಜನೆಯಡಿ 1999 ರಿಂದ 2024 ರವರೆಗೆ ಮಾಡಲಾಗಿರುವ ವೆಚ್ಚದ ವಿವರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ಡ್ಯಾಂ ಮತ್ತು ಅಲೈಡ್ ವರ್ಕ್ | ಕಾಲುವೆ ಮತ್ತು ಶಾಖೆಗಳು ಮತ್ತು ಏತ ನೀರಾವರಿ | ವಿತರಣಾ ನಾಲೆ | FIC | ಭೂಸ್ವಾಧೀನ ಮತ್ತು ಅರಣ್ಯ | (R&R) | ರಸ್ತೆಗಳು | ಕಟ್ಟಡಗಳು ಮತ್ತು ಸೇತುವೆ | ನಿರ್ವಹಣೆ ವೆಚ್ಚ | ಟಿ & ಪಿ | ಇತರೇ ವೆಚ್ಚ | ಸಿಬ್ಬಂದಿ | ಒಟ್ಟು ವೆಚ್ಚ |
|---|---|---|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** | **15** |
| 1 | **1998-99** | 0.00 | 64.93 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 36.32 | **101.25** |
| 2 | **1999-2000** | 0.00 | 159.25 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 46.94 | **206.19** |
| 3 | **2000-01** | 0.00 | 305.95 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 43.08 | **349.03** |
| 1 | **2001-02** | 0.00 | 371.41 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 56.84 | **428.25** |
| 2 | **2002-03** | 16.99 | 322.26 | 0.00 | 0.00 | 2.00 | 0.00 | 0.00 | 0.00 | 0.00 | 0.00 | 0.00 | 82.18 | **423.43** |
| 3 | **2003-04** | 5.90 | 211.54 | 0.00 | 0.00 | 83.09 | 0.00 | 0.00 | 6.35 | 0.00 | 0.00 | 0.00 | 98.20 | **405.08** |
| 4 | **2004-05** | 4.80 | 1485.37 | 17.61 | 0.00 | 1.30 | 0.00 | 0.00 | 12.19 | 0.00 | 2.56 | 0.00 | 114.39 | **1638.22** |
| 5 | **2005-06** | 1445.51 | 2359.84 | 50.34 | 0.00 | 0.00 | 0.00 | 0.00 | 6.11 | 0.00 | 0.13 | 0.00 | 116.54 | **3978.47** |
| 6 | **2006-07** | 513.63 | 2485.18 | 61.50 | 0.00 | 546.33 | 0.00 | 0.00 | 0.76 | 0.00 | 1.59 | 0.00 | 118.80 | **3727.79** |
| 7 | **2007-08** | 5450.67 | 2176.89 | 12.15 | 0.00 | 412.57 | 0.00 | 9.50 | 10.92 | 4.13 | 1.41 | 1.41 | 160.33 | **8239.98** |
| 8 | **2008-09** | 4160.96 | 2095.55 | 34.03 | 0.00 | 102.97 | 0.00 | 33.36 | 4.66 | 0.00 | 4.18 | 0.00 | 170.57 | **6606.28** |
| 9 | **2009-10** | 724.70 | 4306.65 | 136.77 | 0.00 | 273.11 | 269.08 | 92.51 | 36.08 | 0.00 | 3.05 | 0.00 | 184.90 | **6026.85** |
| 10 | **2010-11** | 68.59 | 3588.86 | 75.68 | 24.10 | 427.70 | 0.05 | 30.16 | 46.61 | 0.00 | 5.93 | 0.00 | 216.89 | **4484.57** |
| 11 | **2011-12** | 0.00 | 1533.11 | 319.35 | 13.71 | 0.00 | 0.00 | 15.13 | 33.15 | 0.00 | 1.96 | 0.00 | 226.90 | **2143.31** |
| 12 | **2012-13** | 1.44 | 5716.82 | 799.29 | 15.25 | 264.75 | 0.00 | 11.37 | 30.45 | 0.00 | 24.78 | 0.00 | 221.96 | **7086.11** |
| 13 | **2013-14** | 0.00 | 5422.90 | 1421.42 | 9.80 | 65.51 | 0.00 | 121.09 | 0.00 | 9.48 | 0.00 | 472.60 | 252.48 | **7775.28** |

| ಕ್ರ. ಸಂ | ವರ್ಷ | ಡ್ಯಾಂ ಮತ್ತು ಅಲೈಡ್ ವರ್ಕ್ | ಕಾಲುವೆ ಮತ್ತು ಶಾಖೆಗಳು ಮತ್ತು ಏತ ನೀರಾವರಿ | ವಿತರಣಾ ನಾಲೆ | FIC | ಭೂಸ್ವಾಧೀನ ಮತ್ತು ಅರಣ್ಯ | (R&R) | ರಸ್ತೆಗಳು | ಕಟ್ಟಡಗಳು ಮತ್ತು ಸೇತುವೆ | ನಿರ್ವಹಣೆ ವೆಚ್ಚ | ಟಿ & ಪಿ | ಇತರೇ ವೆಚ್ಚ | ಸಿಬ್ಬಂದಿ | ಒಟ್ಟು ವೆಚ್ಚ |
|---|---|---|---|---|---|---|---|---|---|---|---|---|---|---|
| 14 | **2014-15** | 25.68 | 5024.65 | 546.66 | 44.31 | 0.00 | 0.00 | 0.00 | 0.00 | 7.46 | 0.00 | 19.34 | 318.53 | **5986.63** |
| 15 | **2015-16** | 23.60 | 3120.15 | 721.91 | 55.44 | 0.00 | 0.00 | 244.47 | 0.00 | 185.33 | 0.00 | 532.56 | 278.59 | **5162.05** |
| 16 | **2016-17** | 52.40 | 2291.72 | 1200.86 | 194.38 | 10.81 | 0.00 | 61.08 | 0.00 | 213.71 | 0.00 | 7.41 | 297.43 | **4329.80** |
| 17 | **2017-18** | 48.36 | 278.84 | 633.71 | 0.00 | 0.34 | 0.00 | 0.15 | 0.00 | 26.54 | 0.00 | 5.05 | 296.23 | **1289.22** |
| 18 | **2018-19** | 16.80 | 1633.49 | 346.09 | 41.02 | 0.00 | 0.00 | 0.23 | 0.00 | 25.19 | 0.00 | 6.52 | 295.39 | **2364.73** |
| 19 | **2019-20** | 172.40 | 6955.14 | 15.79 | 0.00 | 3.01 | 0.00 | 261.06 | 1.32 | 26.59 | 0.00 | 7.44 | 333.50 | **7776.25** |
| 20 | **2020-21** | 20.37 | 9631.30 | 106.99 | 0.00 | 0.00 | 0.00 | 3463.81 | 1195.39 | 55.62 | 0.00 | 8.59 | 300.54 | **14782.61** |
| 21 | **2021-22** | 148.43 | 5925.10 | 631.31 | 0.00 | 12.96 | 0.00 | 1847.66 | 1059.91 | 36.76 | 0.00 | 10.36 | 361.29 | **10033.78** |
| 22 | **2022-23** | 46.16 | 5187.70 | 1177.12 | 1.88 | 17.56 | 0.00 | 4312.00 | 1075.96 | 94.43 | 7.98 | 9.84 | 393.98 | **12324.61** |
| 23 | **2023-24** | 23.42 | 1576.99 | 753.36 | 0.00 | 4.16 | 0.00 | 1382.53 | 266.96 | 43.01 | 0.00 | 14.54 | 495.43 | **4560.40** |
| 24 | **2024-25 (upto 02/2025)** | 78.74 | 585.46 | 0.44 | 0.00 | 2.88 | 0.00 | 2441.50 | 45.09 | 8.11 | 0.00 | 10.95 | 479.04 | **3652.21** |
| **TOTAL** | | **13049.55** | **74817.05** | **9062.38** | **399.89** | **2231.05** | **269.13** | **14327.61** | **3831.91** | **736.36** | **53.57** | **1106.61** | **5997.26** | **125882.37** |

**ಅನುಬಂಧ-2**

## ವಾರಾಹಿ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ, ಪುತ್ತೂರು ತಾಲ್ಲೂಕುಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ತಾಲ್ಲೂಕು | ಕಾಮಗಾರಿ/ಯೋಜನೆಯ ಹೆಸರು | ಅಂದಾಜು ಮೊತ್ತ |
|---|---|---|---|
| 1. | ಬಂಟ್ವಾಳ | Construction of Retaining wall to Nethravati river near shree Veerbhadra& Nalkaithaya Panjurli temple in Narikombu grama panchayat, in Bantwal Assembly Constituency Bantwal taluk, Dakshina Kannada Dist. Under Varahi Irrigation Project 2022-23. KNNL/2022-23/OW/WORK_INDENT35906 | 400.00 |
| 2. | ಪುತ್ತೂರು | 2024-25ನೇ ಸಾಲಿಗೆ ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲೂಕಿನ ಕೆಯ್ಯೂರು ಗ್ರಾಮ ಪಂಚಾಯತ್ ವ್ಯಾಪ್ತಿಯಡಿ ಬರುವ ಶೇಖಮಲೆಯಿಂದ ದೆರ್ಲ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 200.00 |
| 3. | ಪುತ್ತೂರು | 2024-25ನೇ ಸಾಲಿಗೆ ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲೂಕಿನ ಕೆದಂಬಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಡಿ ಬರುವ ಸಾರೆಪುಣಿಯಿಂದ ಕೋರಿಕ್ಕಾರು ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 200.00 |
| 4. | ಬಂಟ್ವಾಳ | 2024-25ನೇ ಸಾಲಿಗೆ ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಂಟ್ವಾಳ ತಾಲೂಕಿನ ಅಳಕೆ ಗ್ರಾಮ ಪಂಚಾಯತ್ ವ್ಯಾಪ್ತಿಯಡಿ ಬರುವ ದೂಜಮಲೆ-ನೆಕ್ಕರೆಯಿಂದ ಮುಳಿಯ-ನೆಕ್ಕಿತಪುಣಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ | 200.00 |
| 5. | ಪುತ್ತೂರು | 2024-25ನೇ ಸಾಲಿಗೆ ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲೂಕಿನ ಕೊಡಿಂಬಾಡಿ ಗ್ರಾಮದ ಶ್ರೀ ಮಹಿಷಮರ್ದಿನಿ ದೇವಸ್ಥಾನದಿಂದ ಪರ್ಣಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ | 200.00 |

*****